





# ಬಣ್ಣಬಣ್ಣದ ಬೂರಲು

ಪ್ರತಿ ಬೀಜವೂ ಸಸಿಯಾಗಬಲ್ಲ ಅದ್ಭುತ ಶಕ್ತಿ ಬೂರಲು ಮರದ್ದು. ಇದರ ಎಲೆಗಳು ಉದುರಿ ದೊಡ್ಡ ದೊಡ್ಡ ಹೂಗಳು ಬಿಟ್ಟಾಗ ನೋಡಲು ಬಲು ಸುಂದರ.

■ ವಿನು ಗಂಗೆ

ನಾನು ಚಿಕ್ಕವಳಿದ್ದಾಗ ನಮ್ಮ ಮನೆಯ ಹತ್ತಿರ ಒಂದು ಮರವಿತ್ತು. ಅದರ ಉದ್ದನೆಯ ಕಾಯಿಗಳು, ನಾವು ಪರೀಕ್ಷೆಗೆ ಓದುವ ವೇಳೆಗೆ ಸರಿಯಾಗಿ ಗಾಳಿ ಬೀಸಿದಾಗಲೆಲ್ಲ ಟಪಟಪ ಬೀಳುತ್ತಿದ್ದವು. ಆ ಶಬ್ದ ನನಗೆ ಎಷ್ಟು ಆಪ್ಯಾಯಮಾನವಾಗಿತ್ತೆಂದರೆ, ತಕ್ಷಣ ಪುಸ್ತಕ ಮುಚ್ಚಿಟ್ಟು ಬಿದ್ದಿರುವ ಕಾಯಿ ಆರಿಸಲು ಓಡುತ್ತಿದ್ದೆ. ನನ್ನ ಹಾಗೆ ಅಕ್ಕಪಕ್ಕದ ಮನೆಯ ಮಕ್ಕಳು ಕೂಡ ಓಡಿಬರುತ್ತಿದ್ದರು.

ಕಾಯಿ ಒಡೆದರೆ ರೇಷ್ಮೆಯಂತೆ ಹೊಳೆಯುವ ಹತ್ತಿ ಅತ್ಯಂತ ಆಕರ್ಷಕ (ಹಾಗಾಗಿ ಇದರ ಇಂಗ್ಲಿಷ್ ಹೆಸರು **silk cotton tree**). ಹಸುರು ನುಣುಪಾದ ಕಾಂಡದ ದೈತ್ಯಾಕಾರದ ಮರದಿಂದ ಪಟ್ಟನೆ ಬಿದ್ದ ಕಾಯಿಯ ಶಬ್ದ ಕೇಳಿ ಮೊದಲು ಓಡಿ ಬಂದವರಿಗೆ ಕಾಯಿ ದಕ್ಕುತ್ತಿದ್ದುದು ಒಂದು ರೀತಿ ಬಹುಮಾನ ಪಡೆದ ಧನ್ಯತೆ ನೀಡುತ್ತಿದ್ದರಿಂದ, ನನ್ನ ವಾರಗೆಯ ಅನೇಕ ಮಕ್ಕಳಿಗೆ ಪರೀಕ್ಷೆಗೆ ಓದುವುದು ನೀರಸ ಎನಿಸಿ ಕಾಯಿ ಆರಿಸುವುದೇ ಮುಖ್ಯವಾದಂತೆ ತೋರುತ್ತಿತ್ತು.

ಆರಿಸಿದ ಕಾಯಿಗಳನ್ನು ಚೀಲದಲ್ಲಿ ತುಂಬಿಸಿ ಆ ಕಾಯೊಳಗಿದ್ದ ಹತ್ತಿಯಿಂದ ಹಾಸಿಗೆ ಮಾಡಿಸಿಕೊಡಲು ಅಪ್ಪನ ಬೆನ್ನು ಹತ್ತಿದ್ದೆ. ಅಪ್ಪ ಎರಡು ಹಾಸಿಗೆ ಕೂಡ ಮಾಡಿಸಿಕೊಟ್ಟಿದ್ದರು.

ನಾನು ಪರೀಕ್ಷೆಗೆ ಓದಲು ಕುಳಿತಾಗಲೆಲ್ಲ ಕಾಯಿ ತರಲು ಓಡುವುದು ಸಾಮಾನ್ಯವಾಗಿದ್ದರಿಂದ ಎರಡನೇ ಪಿಯುಸಿ ಫಲಿತಾಂಶ ಹೊರಬಂದ ಬಹಳ ದಿನಗಳವರೆಗೆ ನಮ್ಮ ಅಮ್ಮ, 'ಈ ಹಾಳು ಹತ್ತಿ ಕಾಯಿ ಆರಿಸದಿದ್ದರೆ ಇನ್ನೂ ಒಳ್ಳೆ ಅಂಕ ಬರುತ್ತಿತ್ತು' ಎಂದು ಬೈಯುತ್ತಿದ್ದರು. ಹೀಗೆ ನನ್ನ ಹಾಗೂ ಅಂದಿನ ನಮ್ಮ ಅಕ್ಕಪಕ್ಕದ ಮನೆಯ ಮಕ್ಕಳ ಭಾವಕೋಶದಲ್ಲಿ ಬೂರಲು ಮರ ಭದ್ರ ಸ್ಥಾನ ಪಡೆದಿದೆ.

ಬೂರಲಿನಲ್ಲಿ ಕೆಂಪು ಬೂರಲು (**ceiba bombax**), ಬಿಳಿ ಬೂರಲು (**ceiba pentandra**) ಹಾಗೂ ಅರಿಷಿಣ ಬೂರಲು (**cochlospermum religiosum**) ಕೂಡ ಇವೆ. ಹೂಗಳ ಬಣ್ಣದ ಆಧಾರದ ಮೇಲೆ ಹೆಸರು. ಕೆಂಪು ಬೂರಲು ಕಾಯಿ ಚಿಕ್ಕದು. ಮರ ನೇರ ಎತ್ತರಕ್ಕೆ ಬೆಳೆಯುತ್ತದೆ. ಮರ ಸಣ್ಣದಿರುವಾಗ ಕಾಂಡದಲ್ಲಿ ಮುಳ್ಳುಗಳಿದ್ದು, ದೊಡ್ಡದಾಗುವಾಗ ಉದುರಿ ಹೋಗುತ್ತವೆ. ಈ ಗುಣ ಜಾನುವಾರುಗಳಿಂದ ಸ್ವಾಭಾವಿಕ ರಕ್ಷಣೆ ಒದಗಿಸುತ್ತದೆ.

ಬಿಳಿ ಬೂರಲು ಕಾಯಿಗಳು ಉದ್ದವಾಗಿರುತ್ತವೆ. ಮರ ನುಣುಪಾಗಿ ಹಸುರು ಕಾಂಡ ಹೊಂದಿದ್ದು, ದೈತ್ಯಾಕಾರವಾಗಿ ಬೆಳೆಯುತ್ತದೆ. ಅರಿಷಿಣದ ಬೂರಲು ಮರ ಸಾಧಾರಣ ಗಾತ್ರ, ಅಂಕುಡೊಂಕಾಗಿ ಬೆಳೆಯುತ್ತದೆ. ಬೆಂಗಳೂರಿನಲ್ಲಿ ಸಾಮಾನ್ಯವಾಗಿ ಕಾಣುವುದು ಬಿಳಿ ಬೂರಲು. ಕೆಂಪು ಹಾಗೂ ಅರಿಶಿನ ಬೂರಲು ಮಲೆನಾಡಿನ ಕಡೆ ಬೆಳೆಯುತ್ತದೆ.

ಬೂರಲು ಮರದ ಎಲೆಗಳು ಉದುರಿ ದೊಡ್ಡ ದೊಡ್ಡ ಹೂಗಳು ಬಿಟ್ಟಾಗ ಆಕರ್ಷಕವಾಗಿ ಕಾಣುತ್ತದೆ. ಪರಾಗಸ್ಪರ್ಶ ಕ್ರಿಯೆಯಲ್ಲಿ ಬಾವಲಿಗಳು ಹಾಗೂ ಹಕ್ಕಿಗಳ ಪಾತ್ರ ಇರುವುದರಿಂದ ಹೂವಿನ ಪಕಳೆಗಳು ಕೋಮಲವಾಗಿರದೆ ಬಲಯುತವಾಗಿರುತ್ತವೆ. ಅನೇಕ ಬಗೆಯ ಪಕ್ಷಿಗಳಿಗೆ ಬೂರಲು ಆಸರೆ. ಬಿಳಿ ಹಾಗೂ ಕೆಂಪು ಬೂರಲು ಮರಗಳು ಬಹಳ ಎತ್ತರಕ್ಕೆ ಬೆಳೆಯುತ್ತವೆ. ಸುತ್ತಳತೆ ಗಮನಾರ್ಹವಾಗಿ ಹೆಚ್ಚು. ಬೆಳವಣಿಗೆಯ ವೇಗ ಕೂಡ ಹೆಚ್ಚು. ನಮ್ಮ ಸಾಮಾನ್ಯ ಹತ್ತಿಯ ಗುಣಮಟ್ಟ ಬೂರಲು ಹತ್ತಿಗೆ ಇರುವುದಿಲ್ಲ.

ಪ್ರತಿ ಬೀಜವೂ ಸಸಿಯಾಗಬಲ್ಲ ಅದ್ಭುತ ಜೀವ ಶಕ್ತಿ ಹೊಂದಿರುವುದರಿಂದ ಬಿಳಿ ಹಾಗೂ ಕೆಂಪು ಬೂರಲು ಮರಗಳು ವಿರಳ ಎನಿಸಿಲ್ಲ. ಆದರೆ ಸದಾ ವಿಶಿಷ್ಟ ಮರಗಳನ್ನು ಅರಸುವ ನನ್ನ ಕಣ್ಣಿಗೆ ಒಮ್ಮೆಯೂ ಹಳದಿ ಬೂರಲು ಕಂಡಿಲ್ಲ. ದಟ್ಟ ಮಲೆನಾಡಿನ ಕಡೆ ಹಾಗೂ ಬರ್ಮಾ, ಥಾಯ್ಲೆಂಡ್‌ನಲ್ಲಿರುವುದು ತಿಳಿದಿದ್ದೇನೆ ಅಷ್ಟೆ. ಬೌದ್ಧ ಧರ್ಮದಲ್ಲಿ ಹಳದಿ ಬೂರಲು ಪವಿತ್ರವಾದುದು.

ಮಕ್ಕಳ ಬಾಲ್ಯದಲ್ಲಿ ಮರ ಗಿಡಗಳ ಜೊತೆಗೆ ನಂಟು ಬೆಸೆಯುವುದು ಅತ್ಯಂತ ಅವಶ್ಯಕ. ಮರ ಗಿಡಗಳೊಂದಿಗಿನ ನಮ್ಮ ಬಾಲ್ಯದ ನೆನಪುಗಳನ್ನು ಮಕ್ಕಳಿಗೆ ಕಥೆಯಾಗಿ ಹೇಳಿ, ಸುತ್ತಮುತ್ತಲಿನ ಮರದ ಬಗ್ಗೆಯಾದರೂ ತಿಳಿವು ಮೂಡಿಸಬೇಕೆಂದು ನನ್ನ ಅನಿಸಿಕೆ. ಮಕ್ಕಳಿಗೆ ಕಾಡನ್ನು ಪರಿಚಯಿಸುವುದು ಕಷ್ಟ ಎಂಬುದು ನಿಜವಾದರೂ ಜೀವವೈವಿಧ್ಯದ ಉದ್ಯಾನವನ (**Bio diversity park**)ಗಳಿಗೆ ಕರೆದುಕೊಂಡು ಹೋಗಬಹುದು.

ಮರಗಳ ವೈವಿಧ್ಯವನ್ನು ಪರಿಚಯಿಸುವುದರ ಮಹತ್ವ ನಾವು ಅರಿಯದೇ ಹೋದಲ್ಲಿ ಅವರ ಜ್ಞಾನದ ಹಸಿವು ತಪ್ಪು ಹಾದಿ ಹಿಡಿದು ಕೊಳ್ಳುಬಾಕ ಸಂಸ್ಕೃತಿಗೆ ನಮ್ಮ ಮಕ್ಕಳು ಈಡಾಗಿ, ಪರಿಸರದಿಂದ ದೂರಾಗುತ್ತಾರೆ. ಒಂದೊಂದು ಮರಗಳೂ ನಮ್ಮ ಜೀವನದಲ್ಲಿ ಹೊಂದಿರುವ ಸಂಬಂಧ ಮನವರಿಕೆ ಆದಾಗ ಮಾತ್ರ ಮರಗಳ ಹಾಗೂ ನಮ್ಮ ಉಳಿವು ಸಾಧ್ಯ. ಮರಗಳ ಕತೆಗಳು ಮಕ್ಕಳಿಗೆ ತಲುಪಲಿ.

ಪ್ರತಿಕ್ರಿಯಿಸಿ: **feedback@sudha.co.in**